ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ/ಜಾ/ಬ/ಸಿಬ್ಬಂದಿ-4/2022-23 205

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಜಾರಿ),
"ವಾಣಿಜ್ಯ ತೆರಿಗೆ ಭವನ", ರಾಘವೇಂದ್ರ ಕಾಲೋನಿ,
2ನೇ ಹಂತ, ಬಳ್ಳಾರಿ.
e-mail:- jcenfczbly@gmail.com
ದೂರವಾಣಿ ಸಂಖ್ಯೆ: 08392-294612, 294901.
ದಿನಾಂಕ:22.06.2022

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ವಿಷಯ: ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಜಾರಿ), ಬಳ್ಳಾರಿ ಕಛೇರಿಯ ನಿರುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು.

ಉಲ್ಲೇಖ:
1. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ ಇವರ ಪತ್ರ ಸಂಖ್ಯೆ:ಪ್ರಾ.ಸಾ.ಅ/ಬಳ್ಳಾರಿ/2021-22, ದಿ:26.10.2021.
2. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರ ಪತ್ರ ಸಂಖ್ಯೆ:.ವಿಹೆಚ್‌ಟಿ/ಸಿಆರ್-21/2015-16, ದಿ:06.01.2022.
3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ ಇವರ ಪತ್ರ ಸಂಖ್ಯೆ:ಪ್ರಾ.ಸಾ.ಅ/ಬಳ್ಳಾರಿ/2022-23, ದಿ:23.05.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಕೊಷ್ಟಕದಲ್ಲಿ ತಿಳಿಸಿದ ಈ ಕಛೇರಿಯ ವಾಹನಗಳು ವಿಲೇವಾರಿ ಹಂತಕ್ಕೆ ತಲುಪಿರುತ್ತವೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ ಇವರು ಅಭಿಪ್ರಾಯಪಟ್ಟಿದ್ದರಿಂದ, ಈ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಉಲ್ಲೇಖಿತ ಪತ್ರ(2)ರಲ್ಲಿ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರ ಅನುಮತಿ ಪಡೆಯಲಾಗಿರುತ್ತದೆ. ಉಲ್ಲೇಖಿತ ಪತ್ರ(3) ರ ಮೂಲಕ ಈ ವಾಹನಗಳ ಮಾರುಕಟ್ಟೆ ಮೌಲ್ಯವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬಳ್ಳಾರಿ ಇವರಿಂದ ಪಡೆಯಲಾಗಿದ್ದು, ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇ ಮಾಡಲು ಉದ್ದೇಶಿಸಲಾಗಿರುವ ವಾಹನಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವಾಹನದ ಹೆಸರು | ವಾಹನ ಸಂಖ್ಯೆ | ತಯಾರಿಕೆ ವರ್ಷ | ಇಂಧನ | ಹರಾಜು ಮಾಡಲು ನಿಗಧಿಪಡಿಸಿದ ಕನಿಷ್ಠ ಮೊತ್ತ | EMD ಮೊತ್ತ ಶೇಕಡ 20% |
|---|---|---|---|---|---|---|
| 1 | ಟಾಟಾ ಸುಮೋ ವಿಕ್ಟಾ ಇಕ್ಸ್ | ಕೆಎ-34, ಜಿ-462 | 2010 | ಡೀಸೆಲ್ | ರೂ.1,05,000/- ಮತ್ತು ತೆರಿಗೆ | ರೂ.21000/- |
| 2 | ಟಾಟಾ ಸುಮೋ ವಿಕ್ಟಾ ಇಕ್ಸ್ | ಕೆಎ-34, ಜಿ-526 | 2012 | ಡೀಸೆಲ್ | ರೂ.1,08,000-00 ಮತ್ತು ತೆರಿಗೆ | ರೂ.21600/- |

ಸಾರ್ವಜನಿಕ ಬಹಿರಂಗ ಹರಾಜಿನ ವೇಳಾ ಪಟ್ಟಿ ಈ ಕೆಳಗಿನಂತಿದೆ.

| | | |
|---|---|---|
| 1 | ಬಹಿರಂಗ ಹರಾಜು ದಿನಾಂಕ | 15.07.2022 |
| 2 | ಸಮಯ | ಬೆಳಿಗ್ಗೆ 11.00 ಗಂಟೆಗೆ |
| 3 | ಹರಾಜು ಮಾಡುವ ಸ್ಥಳ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಜಾರಿ), "ವಾಣಿಜ್ಯ ತೆರಿಗೆ ಭವನ", ರಾಘವೇಂದ್ರ ಕಾಲೋನಿ, 2ನೇ ಹಂತ, ಬಳ್ಳಾರಿ-583101. |



Scanned by CamScanner

**ಷರತ್ತು ಮತ್ತು ನಿಬಂಧನೆಗಳು:**

| | |
|---|---|
| 1 | ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು. |
| 2 | The Disposal of vehicle shall be strictly *on "AS IS WHERE IS BASIS"* and no guarantee or certificate of fits worthiness or Quality will be given by DEPARTMENT OF COMMERCIAL TAXES. |
| 3 | ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು. |
| 4 | ಈ ಹರಾಜಿನಲ್ಲಿ ಪಾಲ್ಗೊಳ್ಳ ಬಯಸುವವರು ದಿನಾಂಕ:13.07.2022ರೊಳಗೆ ಯಾವ ವಾಹನದ ಸಂಬಂಧ ಹರಾಜಿನಲ್ಲಿ ಪಾಲ್ಗೊಳ್ಳುವವರು **ಸದರಿ ವಾಹನದ ಹರಾಜು ಮಾಡಲು ನಿಗದಿಪಡಿಸಿದ ಕನಿಷ್ಠ ಮೌಲ್ಯದ ಶೇ.20ರಷ್ಟು** ಹಣವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿರವರ ಕಛೇರಿಯಲ್ಲಿ ಡಿ.ಡಿ. ರೂಪದಲ್ಲಿ EMD ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. EMD ಪಾವತಿ ಮಾಡುವ ದಿನದಂದು ಗುರುತಿನ ಚೀಟಿಯನ್ನು ತರತಕ್ಕದ್ದು ಹಾಗೂ ಸದರಿ ಗುರುತಿನ ಚೀಟಿಯ ನಕಲನ್ನು ಸಲ್ಲಿಸುವುದು. ಠೇವಣಿಯು ಯಾರ ಹೆಸರಿನಲ್ಲಿ ಇರುವುದೋ ಅವರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಇರುತ್ತದೆ. ಬೇರೆಯವರಿಗೆ ಅವಕಾಶ ಇರುವುದಿಲ್ಲ. **ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.** |
| 5 | ಸದರಿ ವಾಹಗಳನ್ನು ಬಳ್ಳಾರಿಯ ರಾಘವೇಂದ್ರ ಕಾಲೋನಿ, 2ನೇ ಹಂತದಲ್ಲಿರುವ ವಾಣಿಜ್ಯ ತೆರಿಗೆ ಭವನದ ಆವರಣದಲ್ಲಿ ನಿಲ್ಲಿಸಲಾಗಿದ್ದು, ಆಸಕ್ತಿಯುಳ್ಳ ಬಿಡ್‌ದಾರರು ವಾಹನಗಳನ್ನು ಕಛೇರಿ ಅವಧಿಯಲ್ಲಿ ದಿ:13.07.2022ರವರೆಗೆ ಪರೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. |
| 6 | ಹರಾಜಿನಲ್ಲಿ ಹಣ ಪಾವತಿಸಿ ಯಶಸ್ವಿ ಆಗದವರಿಗೆ, ಡಿ.ಡಿ. ರೂಪದಲ್ಲಿ ನೀಡಿದ ಠೇವಣಿಯನ್ನು ಹರಾಜಿನ ದಿನವೇ ಹಿಂದಿರುಗಿಸಲಾಗುವುದು. |
| 7 | ಬಹಿರಂಗ ಹರಾಜು ಮುಗಿದ ಮೇಲೆ ಅತೀ ಹೆಚ್ಚು ಬಿಡ್ ಮಾಡಿದ ಬಿಡ್ಡುದಾರರು ಮಾರಾಟದ ಮೊತ್ತ ಹಾಗೂ ತೆರಿಗೆಗಳು ಸೇರಿದಂತೆ **ಶೇ.50 ಭಾಗವನ್ನು ಹರಾಜು ದಿನವೇ** ಸರ್ಕಾರದ ಲೆಕ್ಕಶೀರ್ಷಿಕೆ **0006-00-800-0-00-000** Other Receipts under GSTಗೆ ಖಜಾನೆ-2ರ ಚಲನ್ ಮೂಲಕ ಪಾವತಿಸಬೇಕು. ಒಂದು ವೇಳೆ ತಾಂತ್ರಿಕ ಕಾರಣಗಳಿಂದಾಗಿ ಹರಾಜು ದಿನವೆ ಜಮಾ ಮಾಡಲು ಸಾಧ್ಯವಾಗದಿದ್ದಲ್ಲಿ, ಈ ಕಛೇರಿಯ ಲಿಖಿತ ಆದೇಶದ ಮೂಲಕ ಹರಾಜಿನ ಮಾರನೇ ದಿನ ಜಮಾ ಮಾಡತಕ್ಕದ್ದು. ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡಿದ ಚಲನ್ ಪ್ರತಿಯನ್ನು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸತಕ್ಕದ್ದು. ಶೇಕಡ 50 ಹಣವನ್ನು ಪಾವತಿ ಮಾಡದೇ ಹೋದಲ್ಲಿ EMD ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. |
| 8 | ಉಳಿದ ಶೇ.50 ಭಾಗ ಹರಾಜಿನ ಹಣವನ್ನು ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಂದ ಒಪ್ಪಿಗೆ ಪತ್ರ ದೊರೆತ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರದ ಲೆಕ್ಕಶೀರ್ಷಿಕೆ **0006-00-800-0-00-000** Other Receipts under GSTಗೆ ಖಜಾನೆ-2ರ ಚಲನ್ ಮೂಲಕ ಪಾವತಿಸಿ **ಸ್ವಂತ ಖರ್ಚಿನಲ್ಲಿ RTO ಕಛೇರಿಯಲ್ಲಿ ವರ್ಗಾವಣೆ ಮಾಡಿಕೊಂಡ ನಂತರ** ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ ಜಾಗದಿಂದ ಯಥಾಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು. |
| 9 | ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗಧಿತ ಅವಧಿಯೊಳಗೆ ಪೂರ್ತಿ ಹಣ ಪಾವತಿಸಿ, ಸ್ವಾಧೀನಕ್ಕೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ **ಪ್ರತಿ ದಿನಕ್ಕೆ ರೂ. 50-00 ನೆಲ ಬಾಡಿಗೆ ವಿಧಿಸಲಾಗುವುದು ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ ಪಾವತಿಸದಿದ್ದರೆ, ಈಗಾಗಲೇ ಪಾವತಿಸಿರುವ ಠೇವಣಿ ಹಣ ಮತ್ತು ತೆರಿಗೆ ಒಳಗೊಂಡಂತೆ ಹರಾಜಿನ ಮೊತ್ತ ಶೇಕಡ 50ನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಮರು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.** |
| 10 | ಇಲಾಖಾ ಅಧಿಕಾರಿ/ಸಿಬ್ಬಂದಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ. |
| 11 | ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ ಇವರ ತೀರ್ಮಾನವೇ ಅಂತಿಮವಾಗಿರುತ್ತದೆ. |
| 12 | ಯಾವುದೇ ಸಂದರ್ಭದಲ್ಲಿಯು ಯಾವುದೇ ಕಾರಣಗಳನ್ನು ನೀಡದೆ ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ. |
| 13 | ಈ ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ಅವಧಿಯಲ್ಲಿ ವಾಹನ ವಿಭಾಗದ ವಿಷಯ ನಿರ್ವಾಹಕರನ್ನು(ಮೊ.ಸಂಖ್ಯೆ:9900891618) ಸಂಪರ್ಕಿಸಲು ತಿಳಿಸಲಾಗಿದೆ. |
| 14 | ಈ ಬಹಿರಂಗ ಹರಾಜಿನ ಪ್ರಕಟಣೆಯನ್ನು ಈ ಇಲಾಖೆಯ ವೆಬ್ ಸೈಟ್‌ನಲ್ಲಿ (ctax.kar.nic.in/Public Auction) ಪ್ರಕಟಿಸಲಾಗಿದ್ದು ಆಸಕ್ತಿಯುಳ್ಳವರು ಪರಿಶೀಲಿಸಲು ತಿಳಿಸಲಾಗಿದೆ. |

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಜಾರಿ),
ಬಳ್ಳಾರಿ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು

Scanned by CamScanner

ಪ್ರತಿಗಳನ್ನು:

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು(ಗಣಕ ಕೇಂದ್ರ), ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ ಕಳುಹಿಸಲಾಗಿದೆ.
3. ವಾಣಿಜ್ಯ ತೆರಿಗೆ ಭವನ ಕಟ್ಟಡದ ಸೂಚನಾ ಫಲಕಕ್ಕೆ, ಪ್ರಕಟಣೆಗಾಗಿ.
4. ಕಛೇರಿ ಪ್ರತಿ.

Scanned by CamScanner